ಹೆಸರಲ್ಲಿ ತಮ್ಮನ್ನು ಅಡಗಿಸಿಕೊಳ್ಳದೆ ನಿಜ ಹೆಸರಲ್ಲಿಯೇ ಬರೆದರು. ಕುಸುಮಾಕರ ದೇವರಗೆಣ್ಣೂರ ಹಾಗೂ ಕಾಮರೂಪಿ ಮಾತ್ರ ಇದಕ್ಕೆ ಅಪವಾದ. ಇವರಲ್ಲಿ ಬರಹನಾಮವು ವ್ಯಕ್ತಿತ್ವದೊಳಗಿನ ಒಡಕನ್ನು ಸೂಚಿಸುವ, ತಮ್ಮನ್ನು ತಾವೇ ಹೊರಗಿನವರಾಗಿ ನಿಂತು ವಿಶ್ಲೇಷಿಸುವ ತಂತ್ರಗಾರಿಕೆಯ ಭಾಗವೂ ಆಗಿದೆ. ಪ್ರಶ್ನೆಯೆಂದರೆ, ಕನ್ನಡಿಗರಾದ ಪ್ರಭಾಕರ ಯಾಕೆ ಕಾಮರೂಪಿಯಾದರು? ಕಾರಣ, ಅವರು ತಮ್ಮ ಮೊದಲ ಬಹುತೇಕ ಸಾಹಿತ್ಯವನ್ನು ರಚಿಸಿದ್ದು ಕಾಮರೂಪವೆಂಬ ಪ್ರಾಚೀನ ಹೆಸರನ್ನುಳ್ಳ ಅಸ್ಸಾಮಿನಲ್ಲಿ; ಬಾಳಿನ ಹೆಚ್ಚಿನ ಕಾಲವನ್ನು ಕಳೆದಿದ್ದೂ ಅಲ್ಲೇ. ಕಾಮರೂಪವೆಂದರೆ ಬಯಸಿದಂತೆ ರೂಪಧಾರಣ ಮಾಡುವ ಅತಿಮಾನುಷ ಶಕ್ತಿಯಾಗಿದ್ದು, ಅವರು ತಮ್ಮ ವ್ಯಕ್ತಿತ್ವವನ್ನು ಲೋಕದರಿವಿಗೆ ಬಾರದಂತೆ ಅಡಗಿಸುವ ವಾಂಛೆಯೂ ಅಲ್ಲಿದೆ. ಸ್ಥಳದಿಂದ ಸ್ಥಳಕ್ಕೆ ಚಲಿಸುವ, ವೃತ್ತಿಯಿಂದ ವೃತ್ತಿಗೆ ಹಾರುವ ಮತ್ತು ಅಜ್ಞಾತವಾಗಿ ಏಕಾಂತದಲ್ಲಿ ಬದುಕುವ ಅವರ ಸ್ವಭಾವದಲ್ಲೂ ಬಹುರೂಪೀ ಗುಣವಿದೆ.

ಪ್ರಭಾಕರ ಅವರು ಯಾವಾಗಲೂ ತಮ್ಮ ಪೂರ್ವಜರ ಕತೆಯೊಂದನ್ನು ತಮಾಷೆಯಾಗಿ ಹೇಳುತ್ತಿದ್ದರು. ಅವರ ಹಿರೀಕರಲ್ಲಿ ಒಬ್ಬರು ಸರ್ಕಾರಿ ನೌಕರಿಗೆ ನೇಮಕಗೊಂಡು, ಸೇವೆಗೆ ಸೇರುವ ಮುನ್ನ ಆಕಸ್ಮಿಕ ತೀರಿಕೊಂಡರಂತೆ. ಸಿಕ್ಕ ನೌಕರಿ ಬಿಡಬಾರದೆಂದು ಅವರ ಸೋದರನು ಅಣ್ಣನ ಹೆಸರಿನಲ್ಲಿ ತಾನೇ ಹೋಗಿ ಸೇವೆಗೆ ಸೇರಿಕೊಂಡನು. ತತ್ಪರಿಣಾಮವೆಂದರೆ, ಅವನ ಮಕ್ಕಳೆಲ್ಲರೂ ದಾಖಲೆಗಾಗಿ ತಮ್ಮ ತಂದೆಯ ಹೆಸರಿಗೆ ಬದಲಾಗಿ ದೊಡ್ಡಪ್ಪನ ಹೆಸರನ್ನೇ ನಮೂದಿಸಬೇಕಾಯಿತು. ಬಾಳಿನ ಇಕ್ಕಟ್ಟುಗಳು ಜನ ಛದ್ಮವೇಷ ಮತ್ತು ಮರೆಮಾಚುವ ಹೆಸರು ಧರಿಸುವಂತೆ ಮಾಡುವುದನ್ನು ಅವರ ಕತೆ ಕಾದಂಬರಿಗಳೂ ಚಿತ್ರಿಸುತ್ತವೆ. ಪ್ರಭಾಕರ ತಮ್ಮ ಮಾತುಕತೆಯಲ್ಲಿ ಪೂರ್ವಜರ ಬಗ್ಗೆ ಹೇಳುತ್ತಿದ್ದರೂ, ಅವರಲ್ಲಿ ಭಾವನಾತ್ಮಕ ಸಂಬಂಧ ಇರಲಿಲ್ಲ. ಅವರು ತಮ್ಮ ತಾಯ ವೈಧವ್ಯದ ಬಗ್ಗೆ ಬರೆದ ಎದೆಹಿಂಡುವ ಬರಹ ('ಬೋಳೀಮಗನ ಕತೆ') ಮಾತ್ರ ಇದಕ್ಕೆ ಅಪವಾದ. ಹೆಚ್ಚಾಗಿ ಅವರು ಬರೆದಿರುವ ಬಿಡಿ ಬರಹಗಳಲ್ಲಿ ಗೆಳೆಯರ ಬಗ್ಗೆಯೇ ಇದೆ. ಅವರ ಹೆಸರಲ್ಲಿರುವ ಮೋಟ್ನಹಳ್ಳಿಯನ್ನು ಹುಡುಕಿ– ಈಗದು ಬೇಚಿರಾಗ್ ಹಳ್ಳಿ– ಅವರೊಮ್ಮೆ ಹೋಗಿದ್ದುಂಟು. ಆದರೆ ಅದರ ಜೊತೆ ತಮಗೆ ಯಾವುದೇ ಆಪ್ತ ನೆನಪುಗಳಿಲ್ಲ ಎಂದು ಹೇಳುತ್ತಿದ್ದರು. ಅವರದು ತಮಿಳುನಾಡಿನಿಂದ ವಲಸೆ ಬಂದ ಕುಟುಂಬ. ಅವರ ಸಮುದಾಯದ ಭಾಷೆ ತಮಿಳುಗನ್ನಡ. ತಮಿಳುನಾಡಿಗೆ ಅಂಟಿಕೊಂಡಂತಿರುವ ಕರ್ನಾಟಕದ ಊರುಗಳಲ್ಲಿರುವ ಈ ಸಮುದಾಯಕ್ಕೆ ಡಿವಿಜಿ, ಬಿಜಿಎಲ್ ಸ್ವಾಮಿ ಸೇರಿದವರು. ದೂರದ ಬಂಧುಗಳಾದ ಡಿವಿಜಿಯವರನ್ನು ಕಾಣಲು ಹೋದಾಗ, ಅವರು ತಮ್ಮ ಸಮುದಾಯದ ಭಾಷೆಯಲ್ಲೇ ಮಾತಾಡುತ್ತಿದ್ದುದನ್ನು ಪ್ರಭಾಕರ ಹೇಳುತ್ತಿದ್ದರು. ಕಳೆದುಹೋಗುವ ಭಾಷೆಗಳ ಬಗ್ಗೆ ಮತ್ತು ಭಾಷೆಯಲ್ಲಿ ಒಂದು ಶಬ್ದದ ಹುಟ್ಟು, ಅದರ ಪಯಣಗಳ ಬಗ್ಗೆ ಅವರಿಗೆ ಆಸ್ಥೆಯಿತ್ತು. ಅವರ ಕೋಣೆ ಹಲವಾರು ನಿಘಂಟುಗಳಿಂದ ತುಂಬಿತ್ತು.

ಪ್ರಭಾಕರರ ಬರಹ ಮತ್ತು ವ್ಯಕ್ತಿತ್ವವನ್ನು ರೂಪಿಸಿದ ಸಂಗತಿಗಳಲ್ಲಿ 'ಇರುವುದನ್ನು ಬಿಟ್ಟು ಇರದುದೆಡೆಗೆ ತುಡಿವ' ಚಡಪಡಿಕೆಯೂ ಒಂದು. ಅವರು ಮಾಡಿದ ಖಂಡಾಂತರ ತಿರುಗಾಟದಲ್ಲೂ ಲೋಕವೀಕ್ಷಣೆಯ ಕುತೂಹಲ ಮಾತ್ರವಿಲ್ಲ, ತಮ್ಮನ್ನು ಹೊಸಹೊಸ ಸನ್ನಿವೇಶಗಳಿಗೆ ಒಡ್ಡಿಕೊಂಡು ಪ್ರಯೋಗಶೀಲರಾಗುವ ಸೃಜನಶೀಲತೆಯಿದೆ. ಇದಕ್ಕೆ ಅವರು ಅಧ್ಯಾಪನ ಬಿಟ್ಟು ಪತ್ರಕರ್ತರಾಗಿದ್ದು ಇಂಬುಕೊಟ್ಟಿತು. ಪ್ರಭಾಕರ ಅವರ ಸಹಪಾಠಿ ಹಾಗೂ ಗೆಳೆಯರೆಂದರೆ – ಲಂಕೇಶ್, ಎಚ್.ಎಸ್. ಬಿಳಿಗಿರಿ, ಯು.ಆರ್. ಅನಂತಮೂರ್ತಿ, ರಾಜೀವ ತಾರಾನಾಥ, ನಿಸಾರ್ ಅಹಮದ್, ಸುಮತೀಂದ್ರ ನಾಡಿಗ. ಗುರುಗಳೆಂದರೆ – ಡಾ. ಮೆಂಜೆನೆಸ್, ಜಿ.ಪಿ. ರಾಜರತ್ನಂ, ಎ.ಎನ್. ಮೂರ್ತಿರಾವ್, ವಿ.ಸೀ. ತಮ್ಮ ಬಂಧುಗಳ, ಗೆಳೆಯರ, ಗುರುಗಳ ಬಗ್ಗೆ ಭಕ್ತಿಯಾಗಲೀ ಕಹಿಯಾಗಲೀ ಇಲ್ಲದೆ, ಅವರ ವ್ಯಕ್ತಿತ್ವದ ವೈರುಧ್ಯ ಚಾಲಾಕಿತನ ದಡ್ಡತನಗಳನ್ನು ಪ್ರಭಾಕರ ವ್ಯಂಗ್ಯದಿಂದ ನೆನೆಯುತ್ತಿದ್ದರು. ಆಗವರ ತುಟಿಯಲ್ಲಿ ಹುಟ್ಟುತ್ತಿದ್ದ ಮುಗುಳುನಗು ಮುಖದ ತುಂಬ ಹರಡಿ ಗಹಗಹಗೊಳ್ಳುತ್ತಿತ್ತು.